**ಸಾಕ್ಷಿಯನ್ನು ದಿಃ 17.12.2024 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಅರ್ಜಿಗಳ ಮೇಲಿನ ಆದೇಶದಂತೆ ಮುಂದುವರೆದ ಪಾಟೀ ಸವಾಲುಃ 1 ರಿಂದ 3 ನೇ ಪ್ರತಿವಾದಿ ರವರ ಪರ ಶ್ರೀ ಹೆಚ್.ಕೆ.ಎ. ವಕೀಲರಿಂದಃ-**

ನಾನು 9 ನೇ ತರಗತಿ ಓದಿದ್ದೇನೆ. ಎಲ್ಲಾ ದಾಖಲೆಗಳನ್ನು ಓದಿ ತಿಳಿದುಕೊಳ್ಳಬಲ್ಲೆ. ನಿಪಿ. 29 ರ ನೊಟೀಸಿನ ಕಾಲಕ್ಕೆ ನನ್ನ ತಾತ ಗುರುಮಲ್ಲಪ್ಪ ಜೀವಂತ ಇದ್ದರು. ನೊಟೀಸಿನಲ್ಲಿ ಲೇಟ್ ಗುರುಮಲ್ಲಪ್ಪ ಎಂದು ಕಾಣಿಸಿದ್ದೇನೆ ಎಂದರೆ ಸರಿ. ದಿಃ 25.09.2009 ರಂದು 1 ರಿಂದ 4 ನೇ ಪ್ರತಿವಾದಿಯರು 1 ಪಾಂಚಾಯತ್ ಪಾರಿಕತ್ತು ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಸದರಿ ಪಂಚಾಯತ್ ಪಾರಿಕತ್ತಿನ ಬಗ್ಗೆ ನನ್ನ ತಾಯಿಗೆ ಗೊತ್ತಿತ್ತು ಎಂದರೆ ಸರಿಯಲ್ಲ. ನನ್ನ ತಾಯಿ ಮತ್ತು ತಂದೆ ಮೌಖಿಕವಾಗಿ ಪಂಚಾಯತ್ ಪಾರಿಕತ್ತು ಮಾಡಿಕೊಳ್ಳುವಂತೆ ತಿಳಿಸಿದ್ದರು ಎಂದರೆ ಗೊತ್ತಿಲ್ಲ. ಈ ದಾವೆಯಲ್ಲಿ ನಿಮ್ಮ ತಾಯಿಯ ಮರಣಾ ನಂತರ ನೀವು ಪಕ್ಷಗಾರರಾಗಿ ಸೇರಿಕೊಂಡಾಗ ನಿಮ್ಮ ತಂದೆಯನ್ನು ಯಾಕೆ ಸೇರಿಕೊಂಡಿಲ್ಲ ಎಂದರೆ ಅವರಿಗೆ ಆರೋಗ್ಯ ಸರಿ ಇರಲಿಲ್ಲ ಮತ್ತು ಮಕ್ಕಳಿಗೆ ಹಕ್ಕು ಇದೆ ಎಂದು ಹೇಳಿದ್ದರಿಂದ ತಂದೆಯನ್ನು ಸೇರಿಸಿಲ್ಲ. 2009-10 ರಲ್ಲಿ ದಾವಾ ಐಟಂ ನಂ. 2 3 ನೇ ಪ್ರತಿವಾದಿ ಹೆಸರಿಗೆ ವಿಭಾಗದ ಮೂಲಕ ಬಂದಿದೆ ಎಂದರೆ ಸರಿಯಲ್ಲ. ದಾವಾ ಐಟಂ ನಂ.3 2009-10 ನೇ ಸಾಲಿನಲ್ಲಿ 2 ನೇ ಪ್ರತಿವಾದಿಯ ಹೆಸರಿಗೆ ವಿಭಾಗದ ಮೂಲಕ ಬಂದಿದೆ ಎಂದರೆ ಸರಿಯಲ್ಲ. ದಾವಾ ಐಟಂ ನಂ.4 1995-96 ರಲ್ಲಿ 2 ನೇ ಪ್ರತಿವಾದಿ ಹೆಸರಿಗೆ ವಿಭಾಗದ ಮೂಲಕ ಬಂದಿದೆ ಎಂದರೆ ವಿಭಾಗ ಮಾಡಿಕೊಂಡಿಲ್ಲ. 1995-96 ರಲ್ಲಿ ನನ್ನ ತಾತ ಬದುಕಿದ್ದಾಗ ನನ್ನ ತಾಯಿ ತಾತನ ಮನೆಗೆ ಹೋಗಿ ಬಂದು ಮಾಡುತ್ತಿದ್ದರು ಎಂದರೆ ಇಲ್ಲ.

ದಾವಾ ಐಟಂ ನಂ.5 ರ ಸ್ವತ್ತು 1995-96 ರ ಹಿಸ್ಸೆ ಮೂಲಕ 1 ನೇ ಪ್ರತಿವಾದಿ ಹೆಸರಿಗೆ ಬಂದು ಖಾತೆ ಬದಲಾಗಿದೆ ಎಂದರೆ ಸರಿಯಲ್ಲ. ದಾವಾ ಐಟಂ ನಂ.6 ರ ಸ್ವತ್ತು 1995-96 ರ ವಿಭಾಗದ ಪ್ರಕಾರ 4 ನೇ ಪ್ರತಿವಾದಿ ಹೆಸರಿಗೆ ಬಂದಿದೆ ಎಂದರೆ ಸರಿಯಲ್ಲ. ನಾನು ಮತ್ತು 4 ನೇ ಪ್ರತಿವಾದಿ ಚೆನ್ನಾಗಿದ್ದೇವೆ. 4 ನೇ ಪ್ರತಿವಾದಿ 1 ರಿಂದ 3 ನೇ ಪ್ರತಿವಾದಿಯರನ್ನು ಎತ್ತಿಕಟ್ಟಿ ನಮ್ಮ ಮೂಲಕ ಈ ದಾವೆ ಹೂಡಿದ್ದಾರೆ ಎಂದರೆ ಸರಿಯಲ್ಲ. ದಿಃ 02.02.2022 ರಂದು ನನ್ನ ತಾತ ಮೃತ ಪಟ್ಟಿದ್ದಾರೆ. ಈಗ ನೋಡುತ್ತಿರುವ ದಿಃ 10.09.2002 ರ ಪಂಚಾಯತ್ ಪಾರಿಕತ್ ಎಂದರೆ ಸರಿ.

ದಾವಾ ಸ್ವತ್ತುಗಳಲ್ಲಿ ನಮಗೆ ಯಾವುದೆ ಹಿಸ್ಸೆಯ ಹಕ್ಕು ಇಲ್ಲ ಎಂದರೆ ಸರಿಯಲ್ಲ, ಆ ರೀತಿ ಹಕ್ಕು ಇದ್ದಿದ್ದರೆ ನಮ್ಮ ತಾತ ಬದುಕಿದ್ದಾಗಲೆ ನಮ್ಮ ತಾಯಿ ಹಿಸ್ಸೆ ಕೇಳುತ್ತಿದ್ದರು ಎಂದರೆ ಸರಿಯಲ್ಲ. ದಾವಾ ಐಟಂ ನಂ.7 ರ ವಿಸ್ತೀರ್ಣ ಹೇಳಲಾಗುತ್ತದೆ ಎಂದರೆ, ಅಲ್ಲಿಗೆ ಹೋಗಲು ಆಗದೆ ಇರುವ ಕಾರಣ ವಿಸ್ತೀರ್ಣ ಹೇಳಲಾಗುವುದಿಲ್ಲ. ನಮ್ಮ ಊರಿನಿಂದ ದಾವಾ ಸ್ವತ್ತುಗಳಿಗೆ ಸುಮಾರು 3 ಕಿ.ಮೀ ದೂರ ಇದೆ. ದಾವಾ ಐಟಂ ನಂ.7 ಯಾರಿಗೆ ಸೇರಿದ್ದು ಎಂದು ವಾದ ಪತ್ರದಲ್ಲಿ ಬರೆಸಿದ್ದಿರಾ ಎಂದರೆ ತಾಯಿಗೆ ಸೇರಿದೆ ಎಂದು ಬರೆಸಿದ್ದೇನೆ.

ದಾವಾ ಐಟಂ ನಂ.8 ಮತ್ತು 9 ರ ವಿಸ್ತೀರ್ಣವನ್ನು ನಿಖರವಾಗಿ ತಿಳಿದುಕೊಂಡಿದ್ದಿರಾ ಎಂದರೆ ಪ್ರತಿವಾದಿಯರು ನಮ್ಮ ಬಳಿ ಮಾತನಾಡುವುದಿಲ್ಲ ಆದ್ದರಿಂದ ಅದರ ಬಗ್ಗೆ ತಿಳಿದುಕೊಳ್ಳಲು ಆಗಿಲ್ಲ. ದಾವಾ ಐಟಂ ನಂ.8 ಮತ್ತು 9, 1 ರಿಂದ 4 ನೇ ಪ್ರತಿವಾದಿಯರ ಹೆಸರಿನಲ್ಲಿದೆ. ಆ ಬಗ್ಗೆ ದಾಖಲೆಯನ್ನು ಹಾಜರು ಪಡಿಸಿದ್ದೇನೆ. ದಾವಾ ಐಟಂ ನಂ. 8 ಮತ್ತು 9 ರ ಕಂದಾಯವನ್ನು ಯಾರು ಪಾವತಿ ಮಾಡುತ್ತಿದ್ದಾರೆ ಎಂಬ ಬಗ್ಗೆ ಈಗಿನ ದಾಖಲೆಯನ್ನು ಹಾಜರು ಪಡಿಸುತ್ತಿರಾ ಎಂದರೆ ಈಗಾಗಲೆ ಹಾಜರು ಪಡಿಸಿದ್ದೇನೆ. ನನ್ನ ತಂದೆಗೆ ಪಾಲು ಪಾರಿಕತ್ತಿನ ಸಂಪೂರ್ಣ ವಿಚಾರ ಗೊತ್ತಿತ್ತು ಎಂದರೆ ಸರಿಯಲ್ಲ. ನಮಗೆ ಆಸಕ್ತಿ ಇಲ್ಲದೆ ಇದ್ದರೂ ಸಹ 4 ನೇ ಪ್ರತಿವಾದಿಯೂ ನನ್ನ ತಾಯಿಗೆ ಪ್ರಚೋದನೆ ನೀಡಿ ಈ ದಾವೆಯನ್ನು ಸಲ್ಲಿಸುವಂತೆ ಮಾಡಿದ್ದಾರೆ ಎಂದರೆ ಸರಿಯಲ್ಲ. ನನ್ನ ತಾಯಿಗೆ ನನ್ನ ತಾತ ಚಿನ್ನ ಮತ್ತು ವರೋಪಚಾರ ಕೊಟ್ಟು ಮದುವೆ ಮಾಡಿದ್ದಾರೆ ಎಂದರೆ ಸರಿಯಲ್ಲ. ಈ ದಾವೆಗೆ ಪೂರಕವಾದ ದಾಖಲೆಯನ್ನು ಹಾಜರು ಪಡಿಸಿಲ್ಲ ಮತ್ತು ನೀಡಿದ ನೊಟೀಸು ಕಾನೂನುಬದ್ಧವಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಅನಿತ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.